**ದಿನಾಂಕ: 22-12-2011 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಹಾಗೂ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು | | | ಹಾಜರಿದ್ದ ಅಧಿಕಾರಿಗಳು | |
|---|---|---|---|---|
| ಶ್ರೀಯುತರಾದ :- | | | | |
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿ |
| 2 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 2 | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 3 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 3 | ಉಪ ನಿಯಂತ್ರಕರು(ಹಣಕಾಸು) |
| 4 | ಗೀತಾ ಶ್ರೀನಿವಾಸ್ ರೆಡ್ಡಿ | ಸದಸ್ಯರು | 4 | ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ /ದಕ್ಷಿಣ) |
| 5 | ಎನ್.ಶಕುಂತಲ | ಸದಸ್ಯರು | 5 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ /ದಕ್ಷಿಣ) |
| 6 | ಅಶ್ವಥ್ ನಾರಾಯಣ.ಜಿ.ಎ. | ಸದಸ್ಯರು | 6 | ಕಾರ್ಯಪಾಲಕ ಅಭಿಯಂತರರು( ಯೋಜನೆ- ಪೂರ್ವ/ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ವಲಯ |
| 7 | ಶ್ರೀ.ಹೆಚ್.ಎನ್.ಗಂಗಾಧರ್ | ಸದಸ್ಯರು | | |
| | | | 7 | ವಲಯ ಅರಣ್ಯಾಧಿಕಾರಿ(ಪೂರ್ವ/ ಪಶ್ಚಿಮ/ ದಕ್ಷಿಣ/ ರಾ.ರಾ.ನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ವಲಯ |
| | | | 8 | ತೋಟಗಾರಿಕೆ ಅಧೀಕ್ಷಕರು(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)ವಲಯ |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡಿದರು.

ಅಧ್ಯಕ್ಷರು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಸಮಿತಿಯು ಕೇಳಿರುವ ವಿವರಗಳಿಗೆ ಮಾಹಿತಿಯನ್ನು ನಿಗಧಿತ ಸಮಯದಲ್ಲಿ ಸಮಿತಿಗೆ ಒದಗಿಸುವಂತೆ ಸೂಚಿಸಿದ್ದರೂ ಸಹ, ಮಾಹಿತಿಯನ್ನು ಒದಗಿಸದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಇನ್ನು ಮುಂದೆ ಈ ರೀತಿ ಕೋರಿರುವ ಮಾಹಿತಿ ಒದಗಿಸಲು ನಿರ್ಲಕ್ಷ ತೋರಿಸಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ತಿಳಿಸುತ್ತಾ, ಕೋರಿರುವ ಮಾಹಿತಿಯನ್ನು ಜರೂರಾಗಿ ಸಮಿತಿಗೆ ಒದಗಿಸುವಂತೆ ಸೂಚಿಸಿದರು ಹಾಗೂ ಸಮಿತಿಯು ಈಗ ನಮೂನೆಗಳಲ್ಲಿ ಕೇಳಿರುವ ವಿವರಗಳಿಗೆ ಮಾಹಿತಿಯನ್ನು ಸಿದ್ದಪಡಿಸಿ ಒಂದು ವಾರದೊಳಗೆ ವರದಿಯನ್ನು ಸಮಿತಿಗೆ ಒದಗಿಸಲು ಸೂಚಿಸಿದರು.

ಕೆರೆಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಕೂಲಂಕುಷವಾಗಿ ಚರ್ಚಿಸಿ, 2011-12ನೇ ಸಾಲಿನ ಆಯವ್ಯಯದಲ್ಲಿ ಕೆರೆಗಳಿಗೆ ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಕ್ರಮ ಪಟ್ಟಿ (ಪಿ.ಓ.ಡಬ್ಲ್ಯೂ)ಯನ್ನು ತಯಾರಿಸಿ ಸಮಿತಿಗೆ ಒದಗಿಸಲು ಸೂಚಿಸಿದರು.

ತೋಟಗಾರಿಕೆ ಇಲಾಖೆಯಲ್ಲಿ ಲಭ್ಯವಿರುವ ಟ್ರೀಗಾರ್ಡ್‌ಗಳ ಬಗ್ಗೆ ಎಲ್ಲಾ ವಾರ್ಡ್ ಸದಸ್ಯರಿಗೆ ಮಾಹಿತಿ ನೀಡಿ, ಅವಶ್ಯಕವಾಗಿರುವ ಟ್ರೀಗಾರ್ಡ್‌ಗಳನ್ನು ಎಲ್ಲಾ ವಾರ್ಡ್‌ಗಳಿಗೆ ತ್ವರಿತವಾಗಿ ಒದಗಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆಲವು ಉದ್ಯಾನವನಗಳನ್ನು ಸಮಿತಿಯ ಗಮನಕ್ಕೆ ತರದೇ ನಿರ್ವಹಣೆ ಮಾಡಲು ಖಾಸಗಿ ಮತ್ತು ಸಂಘ–ಸಂಸ್ಥೆಗಳಿಗೆ ಗುತ್ತಿಗೆ ನೀಡಿರುವುದು ಕಂಡು ಬಂದಿದ್ದು, ಈ ರೀತಿ ಎಷ್ಟು ಉದ್ಯಾನವನಗಳನ್ನು ಖಾಸಗಿ ಮತ್ತು ಸಂಘ–ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ? ಇದರಿಂದ ಪಾಲಿಕೆಗೆ ಬರುವ ಆದಾಯ ಮತ್ತು ಅನುಕೂಲದ ಬಗ್ಗೆ ಪ್ರಶ್ನಿಸುತ್ತಾ, ಖಾಸಗಿ ಮತ್ತು ಸಂಘ–ಸಂಸ್ಥೆಗಳಿಗೆ ನೀಡಿರುವ ಉದ್ಯಾನವನಗಳ ನಿರ್ವಹಣೆ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**ಶ್ರೀಮತಿ.ಗೀತಾ ಶ್ರೀನಿವಾಸರೆಡ್ಡಿ, ಸದಸ್ಯರು** ಮಾತನಾಡುತ್ತಾ, ದೊಮ್ಮಲೂರು, ವಾರ್ಡ್ 112 ರಲ್ಲಿ ಉದ್ಯಾನವನಗಳ ನಿರ್ವಹಣೆ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು, ಉದ್ಯಾನವನಗಳಲ್ಲಿ ಕಾವಲುಗಾರರುಗಳು ಸಹ ಇರುವುದಿಲ್ಲವೆಂದು, ಬೋರ್‌ವೆಲ್‌ಗಳು ಕೆಟ್ಟುಹೋಗಿದ್ದರೂ ಸಹ ರಿಪೇರಿ ಮಾಡಿಸಿರುವುದಿಲ್ಲ, ಶೌಚಾಲಯಗಳಿಲ್ಲ ಹಾಗೂ ಕೆಲವು ಉದ್ಯಾನವನಗಳಿಗೆ ಚೈನ್ ಲಿಂಕ್ ಪೆನ್ಸಿಂಗ್ ಸಹ ಇರುವುದಿಲ್ಲವೆಂದು ದೂರಿದರು. ಈ ಸಂಬಂಧ ದೂರು ನೀಡಲು ಅನುವುವಾಗುವಂತೆ, ಪಾಲಿಕೆ ವ್ಯಾಪ್ತಿಯಲ್ಲಿನ ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರ ಹೆಸರು ಮತ್ತು ದೂರವಾಣಿ ಸಂಖ್ಯೆಗಳನ್ನು ನಾಮಫಲಕದಲ್ಲಿ ಪ್ರಕಟಿಸುವಂತೆ ಸಲಹೆ ನೀಡಿದರು.

**ಅಧ್ಯಕ್ಷರು** : ಉದ್ಯಾನವನಗಳ ನಿರ್ವಹಣೆ ಬಗ್ಗೆ ಪಾಲಿಕೆ ಸದಸ್ಯರು ಹಾಗೂ ಸಾರ್ವಜನಿಕರಿಂದ ಸಮರ್ಪಕವಾಗಿ ಉದ್ಯಾನವನಗಳ ನಿರ್ವಹಣೆಯನ್ನು ನಿರ್ವಹಿಸದೇ ಇರುವ ಬಗ್ಗೆ ಹಲವು ದೂರುಗಳು ಕೇಳಿಬರುತ್ತಿದ್ದು, ಪಾಲಿಕೆ ವ್ಯಾಪ್ತಿಯಲ್ಲಿನ ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರ ಹೆಸರು ಮತ್ತು ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ಉದ್ಯಾನವನಗಳಲ್ಲಿ ನಾಮಫಲಕದಲ್ಲಿ ಪ್ರಕಟಿಸುವಂತೆ ಮಾನ್ಯ ಆಯುಕ್ತರಿಗೆ ಸುತ್ತೋಲೆ ಹೊರಡಿಸಲು ಆದೇಶ ನೀಡುವಂತೆ ಕೋರಿ ಪತ್ರ ಬರೆಯಲಾಗುವುದೆಂದು ತಿಳಿಸಿದರು ಹಾಗೂ ನಿರ್ವಹಣೆ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದ ಪಕ್ಷದಲ್ಲಿ ಸಾರ್ವಜನಿಕರು ದೂರವಾಣಿ ಮುಖಾಂತರ ದೂರು ನೀಡಲು ಅನುಕೂಲವಾಗುತ್ತದೆ ಹಾಗೂ ಗುತ್ತಿಗೆದಾರರ ನಿರ್ವಹಣೆ ಅವಧಿ ಮುಗಿದ ನಂತರ, ಸಂಬಂಧಪಟ್ಟ ಅಧಿಕಾರಿಗಳು ಆಯಾ ವಾರ್ಡ್ ಸದಸ್ಯರೊಂದಿಗೆ ಚರ್ಚೆ ಮಾಡಿ ವಾರ್ಡ್ ಸದಸ್ಯರುಗಳು ಸೂಚಿಸುವ ಗುತ್ತಿಗೆದಾರರನ್ನು ಉದ್ಯಾನವನಗಳ ನಿರ್ವಹಣೆ ಕಾರ್ಯಕ್ಕೆ ನಿಯೋಜಿಸಲು ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿರುವ ಉದ್ಯಾನವನಗಳ ಮಾಹಿತಿಯನ್ನು ವಾರ್ಡ್‌ವಾರು ಪಾಲಿಕೆ ಸದಸ್ಯರಿಗೆ ನೀಡಲು ಸೂಚಿಸಿದರು.

**ಶ್ರೀ.ಓಂ.ಪ್ರಕಾಶ್, ತೋಟಗಾರಿಕೆ ಅಧೀಕ್ಷಕರು(ರಾಜರಾಜೇಶ್ವರಿನಗರ)** : ಪಾಲಿಕೆಯಲ್ಲಿ ಎಂಟು ಜನ ತೋಟಗಾರಿಕೆ ಅಧೀಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ತೋಟಗಾರಿಕೆ ಅಧೀಕ್ಷಕರುಗಳಿಗೆ ವಾಹನ ಸೌಲಭ್ಯವನ್ನು ಒದಗಿಸಿರುವುದಿಲ್ಲವೆಂದು, ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ ವಲಯಗಳು ತುಂಬಾ ದೂರವಿರುವುದರಿಂದ, ಉದ್ಯಾನವನಗಳ ತಪಾಸಣೆಗೆ ಹೋಗಿ ಬರಲು ತುಂಬಾ ಸಮಯ

ಬೇಕಾಗುತ್ತದೆ ಹಾಗೂ ಕಛೇರಿ ಕೆಲಸ ಕಾರ್ಯಗಳು ವಿಳಂಬವಾಗುತ್ತದೆಂದು, ಬೇಸಿಗೆ ಕಾಲದಲ್ಲಿ ನಾಲ್ಕೈದು ಬಾರಿ ಉದ್ಯಾನವನಗಳ ತಪಾಸಣೆ ಮಾಡಬೇಕಾಗಿದ್ದು, ವಾಹನಗಳಿಲ್ಲದೆ ತೊಂದರೆಯಾಗಿದೆ ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು.

**ಅಧ್ಯಕ್ಷರು** : ಪಾಲಿಕೆಯ ಕೆಲಸಕಾರ್ಯಗಳ ಹಿತದೃಷ್ಠಿಯಿಂದ, ತೋಟಗಾರಿಕೆ ಅಧೀಕ್ಷಕರುಗಳಿಗೆ ವಾಹನ ಸೌಲಭ್ಯವನ್ನು ಒದಗಿಸುವಂತೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದೆಂದು ತಿಳಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

## 1. ವಿಷಯ ಸಂಖ್ಯೆ:ತೋ/ಸ್ಥಾ/ಸ/23/ 11–12, ದಿನಾಂಕ: 13–10–2011

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಾರ್ಡ್ ಸಂ.73 ಮತ್ತು 198ರ ಉದ್ಯಾನವನಗಳ ಆಸ್ತಿ ರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಮಾನ್ಯ ಅಧ್ಯಕ್ಷರು, ತೋಟಗಾರಿಕೆ ಸ್ಥಾಯಿ ಸಮಿತಿರವರು ಸೂಚಿಸಿರುವಂತೆ 2011–12ನೇ ಸಾಲಿಗೆ ಒಟ್ಟು 10 ಉದ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಮೊತ್ತ ಒಟ್ಟು ರೂ.198.25 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿ ಜಾಬ್‌ಕೋಡ್ ಪಡೆದು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅನುಮೋದನೆಗಾಗಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 21–07–2011 ರ ಟಿಪ್ಪಣಿ

**ನಿರ್ಣಯ :– ಮಾನ್ಯ ಆಯುಕ್ತರ ದಿನಾಂಕ:21–07–2011ರ ಟಿಪ್ಪಣಿಯನ್ನು ಒಪ್ಪುತ್ತಾ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09–09–2011ರ ನಿರ್ಣಯದಂತೆ, ತೋಟಗಾರಿಕೆ ಸ್ಥಾಯಿ ಸಮಿತಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಶೀರ್ಷಿಕೆ ಪಿ1868ರ ಅನುದಾನದಡಿಯಲ್ಲಿ ಜಾಬ್‌ಕೋಡ್ ನೀಡಿ, ಪಾಲಿಕೆ ಆಸ್ತಿಯನ್ನು ಸಂರಕ್ಷಿಸಿಕೊಳ್ಳ ಬೇಕಾಗಿರುವುದರಿಂದ, ಕೂಡಲೇ ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ಕಾಮಗಾರಿಯನ್ನು ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

## 2. ವಿಷಯ ಸಂಖ್ಯೆ:ತೋ/ಸ್ಥಾ/ಸ/24/ 11–12, ದಿನಾಂಕ: 13–10–2011

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಾರ್ಡ್ ಸಂ. *38, 73, 129, 130* ಮತ್ತು 198ರ ಉದ್ಯಾನವನಗಳ ಆಸ್ತಿ ರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಮಾನ್ಯ ಅಧ್ಯಕ್ಷರು, ತೋಟಗಾರಿಕೆ ಸ್ಥಾಯಿ ಸಮಿತಿರವರು ಸೂಚಿಸಿರುವಂತೆ 2011–12ನೇ ಸಾಲಿಗೆ ಒಟ್ಟು 11 ಉದ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಮೊತ್ತ ಒಟ್ಟು ರೂ.204.59 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿ ಜಾಬ್‌ಕೋಡ್ ಪಡೆದು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅನುಮೋದನೆಗಾಗಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 24–07–2011 ರ ಟಿಪ್ಪಣಿ

**ನಿರ್ಣಯ:-** **ಮಾನ್ಯ ಆಯುಕ್ತರ ದಿನಾಂಕ:24-07-2011ರ ಟಿಪ್ಪಣಿಯನ್ನು ಒಪ್ಪುತ್ತಾ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011ರ ನಿರ್ಣಯದಂತೆ, ತೋಟಗಾರಿಕೆ ಸ್ಥಾಯಿ ಸಮಿತಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಶೀರ್ಷಿಕೆ ಪಿ1868ರ ಅನುದಾನದಡಿಯಲ್ಲಿ ಜಾಬ್‌ಕೋಡ್ ನೀಡಿ, ಪಾಲಿಕೆ ಆಸ್ತಿಯನ್ನು ಸಂರಕ್ಷಿಸಿಕೊಳ್ಳ ಬೇಕಾಗಿರುವುದರಿಂದ, ಕೂಡಲೇ ಮೆ||ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ಕಾಮಗಾರಿಯನ್ನು ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

**3. ವಿಷಯ ಸಂಖ್ಯೆ:ತೋ/ಸ್ಥಾ/ಸ/29/ 11-12, ದಿನಾಂಕ: 03-11-2011**

ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:145ರಲ್ಲಿರುವ ಡೆಬ್ರಿಸ್‌ನಿಂದ ಕೂಡಿರುವ ಲಕ್ಕಸಂದ್ರ ಕ್ವಾರಿ ಪಿಟ್‌ನ 6 ಎಕರೆ ಪ್ರದೇಶವನ್ನು ಸಮತಟ್ಟು ಮಾಡಿ ಈ ಮಳೆಗಾಲವು ಕೊನೆಗೊಳ್ಳುವುದರೊಳಗಾಗಿ ಗಿಡಗಳನ್ನು ನೆಟ್ಟು ಸುಂದರ ವೃಕ್ಷವನವನ್ನಾಗಿ ಪರಿವರ್ತಿಸುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ 2010-11ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ರೂ.3.30ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಮಂಜೂರಾತಿಯನ್ನು ನಿರೀಕ್ಷಿಸಿ, ಕೆ.ಆರ್.ಐ.ಡಿ.ಎಲ್. ಮುಖಾಂತರ ಕೈಗೆತ್ತಿಕೊಳ್ಳಲಾಗಿರುತ್ತದೆ. ಈ ಕಾಮಗಾರಿಗೆ ತಗಲುವ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದಲ್ಲಿ Improvements to Lakkasandra Quarry in Ward No.145, Dudget Code - p-1549 ರಲ್ಲಿ ಲಭ್ಯವಿರುವ 563.00 ಲಕ್ಷಗಳ ಅನುದಾನದಲ್ಲಿ ಭರಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಅನುಮೋದನೆ ಕೋರಿದೆ.

- **ಕಾಮಗಾರಿ ಸಂಕೇತ,**
- **ಆಡಳಿತಾತ್ಮಕ ಅನುಮೋದನೆ,**
- **ಮಂಜೂರಾತಿಯನ್ನು ನಿರೀಕ್ಷಿಸಿ,** ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಮುಖಾಂತರ ಕೈಗೆತ್ತಿಕೊಂಡಿರುವುದನ್ನು ಸ್ಥಿರೀಕರಣಗೊಳಿಸಲು ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:29-10-2011 ರ ಟಿಪ್ಪಣಿ.

**ನಿರ್ಣಯ :- ಮಾನ್ಯ ಆಯುಕ್ತರ ದಿನಾಂಕ:29-10-2011 ರ ಟಿಪ್ಪಣಿಯನ್ನು ಒಪ್ಪಿದೆ.**

**4. ವಿಷಯ ಸಂಖ್ಯೆ:ತೋ/ಸ್ಥಾ/ಸ/32/ 11-12, ದಿನಾಂಕ: 16-11-2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಅಂಬಲೀಪುರ (ಕೆಳಗಿನ) ಕೆರೆ ಆರ್.ಸಿ.ಸಿ.(ತಿರುವು) ಡ್ರೈನ್ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗೆ ಮುಖ್ಯ ಅಭಿಯಂತರರು (ಪರಿಸರ ಕೋಶ) ರವರು ಅಂಬಲೀಪುರ (ಕೆಳಗಿನ) ಕೆರೆ ಆರ್.ಸಿ.ಸಿ. (ತಿರುವು) ಡ್ರೈನ್ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಮೊತ್ತ ರೂ.80.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ–2088 ಅಡಿಯಲ್ಲಿ ರೂ.60.00 ಲಕ್ಷಗಳನ್ನು ಮತ್ತು ಹೊಸ ಕೆರೆಗಳ ಅಭಿವೃದ್ಧಿಗಾಗಿ ಲೆಕ್ಕ ಶೀರ್ಷಿಕೆ ಪಿ–2175 ಅಡಿಯಲ್ಲಿ ರೂ.3000.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ.

ಮೊದಲನೇ ಹಂತದ ಕಾಮಗಾರಿಯಲ್ಲಿ ಕೆರೆಯಲ್ಲಿನ ಹೂಳು ತೆಗೆಯುವುದು, ಏರಿ ಅಭಿವೃದ್ಧಿಪಡಿಸುವುದು. ಪಾದಚಾರಿ ರಸ್ತೆ ನಿರ್ಮಿಸುವುದು, ಇನ್ ಲೆಟ್‌ಗಳ ಅಭಿವೃದ್ಧಿ, ಇತ್ಯಾದಿಗಳನ್ನೊಳಗೊಂಡಂತೆ, ಕಾಮಗಾರಿ ನಿರ್ವಹಿಸಿ ಪೂರ್ಣಗೊಂಡಿದೆ. ರಾಜಕಾಲುವೆ ಒತ್ತುವರಿಯನ್ನು ಈಗ ತೆರವುಗೊಳಿಸಿರುವುದರಿಂದ ಕೆರೆಗೆ ಅವಶ್ಯವಿರುವ ಸೀವೇಜ್ ಡೈವರ್ಷನ್ ಡ್ರೈನ್, ಜನಗಳು ಕೆರೆಗೆ ಇಳಿಯದಂತೆ ತಡೆ ನಿರ್ಮಿಸಲು ಫೆನ್ಸ್ ಹಾಕುವುದು, ವಾಕ್‌ವೇ ನಿರ್ಮಾಣ, ಕೆರೆಗೆ ಗೇಟ್ ಅಳವಡಿಕೆ ಹಾಗೂ ಕಲ್ವರ್ಟ್‌ಗಳ ಅವಶ್ಯವಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.80.00 ಲಕ್ಷಗಳಿಗೆ (ಎಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: **27–10–2011** ರ ಟಿಪ್ಪಣಿ.

**<u>ನಿರ್ಣಯ</u> :– ಮಾನ್ಯ ಆಯುಕ್ತರ ದಿನಾಂಕ: 27–10–2011 ರ ಟಿಪ್ಪಣಿಯನ್ನು ಒಪ್ಪಿದೆ.**

**5. ವಿಷಯ ಸಂಖ್ಯೆ:ತೋ/ಸ್ಥಾ/ಸ/33/ 11–12, ದಿನಾಂಕ: 16–11–2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ಉತ್ತರ ವಿಭಾಗದ ವ್ಯಾಪ್ತಿಗೆ ಬರುವ ನಾಲ್ಕು ವಲಯಗಳಾದ ಪೂರ್ವ, ಯಲಹಂಕ, ದಾಸರಹಳ್ಳಿ ಮತ್ತು ಮಹದೇವಪುರ ವಲಯಗಳಲ್ಲಿ 2012ನೇ ಮಳೆಗಾಲದಲ್ಲಿ ನೆಡುತೋಪು ಬೆಳೆಸಲು ಪೂರಕವಾಗಿ ವಿವಿಧ ಗಾತ್ರದ ಪಾಲಿಥೀನ್ ಚೀಲಗಳಲ್ಲಿ ಸಸಿಗಳನ್ನು ಬೆಳೆಸಿ ಪೋಷಣೆ ಮಾಡುವ ಕಾಮಗಾರಿಯು ಋತುಮಾನಕ್ಕೆ ಅನುಗುಣವಾಗಿದ್ದು, ತುರ್ತು ಸಂದರ್ಭಾನುಸಾರ ನಿರ್ವಹಿಸಬೇಕಾಗಿರುವುದರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಅನುಮೋದನೆಗಾಗಿ ಹಾಗು ಸದರಿ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ.148.67 ಲಕ್ಷಗಳಿಗೆ ಜಾಬ್ ಸಂಕೇತವನ್ನು ನೀಡಲು ಕೋರಿ ಕಡತವನ್ನು ಸಲ್ಲಿಸಿದ್ದು, ಸದರಿ ಕಾಮಗಾರಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಕೈಗೊಳ್ಳಲು ಹಾಗೂ ಅನುದಾನವನ್ನು ಬಿಡುಗಡೆಗೊಳಿಸುವ ಸಲುವಾಗಿ ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:09–11–2011 ರ ಟಿಪ್ಪಣಿ.

<u>ನಿರ್ಣಯ</u> : **–.ಮಾನ್ಯ ಆಯುಕ್ತರ ದಿನಾಂಕ:09–11–2011 ರ ಟಿಪ್ಪಣಿಯನ್ನು ಒಪ್ಪಿದೆ.**

**6. ವಿಷಯ ಸಂಖ್ಯೆ:ತೋ/ಸ್ಥಾ/ಸ/34/ 11–12, ದಿನಾಂಕ: 16–11–2011**

*ಬ್ಯಾಟರಾಯನಪುರ ವಲಯದ ನರಸೀಪುರ ಕೆರೆಯ ಸಮಗ್ರ ಅಭಿವೃದ್ಧಿ* ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು–2, ಪರಿಸರ ಕೋಶ, ಕೆರೆಗಳು ರವರು ಮೊದಲನೇ ಕರೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 (ಎರಡು) ಟೆಂಡರ್‌ಗಳು ಸ್ವೀಕೃತವಾಗಿದ್ದು, 02(ಇಬ್ಬರು) ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ

ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು – 2, ಪರಿಸರ ಕೋಶ, ಕೆರೆಗಳುರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಸಿ.ಜಿ.ಚಂದ್ರಪ್ಪ, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ರೂ.178.01 ಲಕ್ಷಗಳ ಕಾಮಗಾರಿಯ ಅಂದಾಜುಪಟ್ಟಿಗೆ ಲೋಕೋಪಯೋಗಿ ಇಲಾಖೆಯ 2010–11 ನೇ ಸಾಲಿನ ದರಪಟ್ಟಿ ಹಾಗೂ ಸಣ್ಣ ನೀರಾವರಿ ಇಲಾಖೆಯ 2007–08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಪರಿಸರ ಕೋಶ (ಕೆರೆಗಳು) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.1,69,75,898.118 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಸಿ.ಜಿ.ಚಂದ್ರಪ್ಪರವರು ಶೇಕಡಾ 0.63% ರಷ್ಟು ಕಡಿಮೆ ದರಗಳನ್ನು, ಅಂದರೆ ರೂ.1,68,69,756.35 ಗಳ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಗುತ್ತಿಗೆದಾರರಾದ ಶ್ರೀ.ಸಿ.ಜಿ.ಚಂದ್ರಪ್ಪರವರು ನಮೂದಿಸಿದ ದರಗಳನ್ನು ಲೋಕೋಪಯೋಗಿ ಇಲಾಖೆಯ 2010–11ನೇ ಸಾಲಿನ ದರಪಟ್ಟಿ ಹಾಗೂ ಸಣ್ಣ ನೀರಾವರಿ ಇಲಾಖೆಯ 2010–11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 18.51% ರಷ್ಟು ಕಡಿಮೆ ದರಗಳಾಗಿರುತ್ತದೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು, ಪರಿಸರ ಕೋಶ, ಕೆರೆಗಳುರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,68,69,756.35ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ./335/ಎಮ್‌ಎನ್‌ವೈ/2007 (ಭಾ) ದಿನಾಂಕ:11–05–2009 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ಎಂಎನ್‌ವೈ/2010, ಬೆಂಗಳೂರು, ದಿನಾಂಕ: 02–04–2011ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ, ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರಾದ ಶ್ರೀ.ಸಿ.ಜಿ.ಚಂದ್ರಪ್ಪರವರು ನಮೂದಿಸಿದ ದರಗಳನ್ನು ಲೋಕೋಪಯೋಗಿ ಇಲಾಖೆಯ 2010–11ನೇ ಸಾಲಿನ ದರಪಟ್ಟಿ ಹಾಗೂ ಸಣ್ಣ ನೀರಾವರಿ ಇಲಾಖೆಯ 2010–11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ, ಶೇಕಡ **18.51% ರಷ್ಟು ಕಡಿಮೆ** ದರಗಳು ಅಥವಾ ***ರೂ.1,68,69,756.35ಗಳ(ಒಂದು ನೂರ ಅರವತ್ತೆಂಟು ಲಕ್ಷ ಅರವತ್ತೊಂಭತ್ತು ಸಾವಿರದ ಏಳು ನೂರ ಐವತ್ತಾರು ರೂಪಾಯಿಗಳು ಹಾಗೂ ಮೂವತ್ತೈದು ಪೈಸೆ ಮಾತ್ರ)*** ಟೆಂಡರ್‌ಗೆ ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:**10–11–2011** ರ ಟಿಪ್ಪಣಿ.

**ನಿರ್ಣಯ : – ಮಾನ್ಯ ಆಯುಕ್ತರ ದಿನಾಂಕ:10–11–2011 ರ ಟಿಪ್ಪಣಿಯನ್ನು ಒಪ್ಪಿದೆ.**

**7. ವಿಷಯ ಸಂಖ್ಯೆ:ತೋ/ಸ್ಥಾ/ಸ/35/ 11–12, ದಿನಾಂಕ: 19–11–2011**

ಮಹದೇವಪುರ ವಲಯದ ದೊಡ್ಡಕನ್ನಲ್ಲಿ ಕೆರೆಯನ್ನು ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ಮೆ॥ಐಡಸ್ ಕನ್ಸಲ್‌ಟೆಂಟ್ ಪ್ರೈ.ಲಿ. ಸಲಹೆಗಾರರಿಗೆ ವಹಿಸಲಾಗಿದ್ದು, ಸದರಿಯವರು ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ದೊಡ್ಡಕನ್ನಲ್ಲಿ ಕೆರೆಗೆ ಈಗಾಗಲೇ ತಂತಿಬೇಲಿಯನ್ನು ಅಳವಡಿಸಲಾಗಿರುತ್ತದೆ. ಕೆರೆಯಲ್ಲಿ ಹಾಲಿ ನೀರು ಶೇಖರಣೆಯಾಗಿರುವುದರಿಂದ ಕೆರೆಯಲ್ಲಿ ಹೂಳು ತೆಗೆಯುವುದನ್ನು ಕೈಬಿಡಲಾಗಿದೆ.

ಯೋಜನಾ ವರದಿಯಂತೆ ದೊಡ್ಡಕನ್ನಲ್ಲಿ ಕೆರೆಯ ಸಮಗ್ರ ಅಭಿವೃದ್ಧಿಗಾಗಿ ರೂ.375.00 ಲಕ್ಷಗಳ ಅಂದಾಜು ಮಾಡಲಾಗಿದೆ. ಅಂದಾಜು ಪಟ್ಟಿಯನ್ನು 2010–11ನೇ ಸಆಲಿನ ಲೋಕೋಪಯೋಗಿ ಹಾಗೂ ಸಣ್ಣ ನೀರಾವರಿ ಇಲಾಖೆಗಳ ದರವನ್ನು ಪರಿಗಣಿಸಿ ತಯಾರಿಸಲಾಗಿದೆ. ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ2175(ಹೊಸ ಕೆರೆಗಳ ಅಭಿವೃದ್ಧಿಗೆ ಮೀಸಲಿರುವ ರೂ.3000.00ಲಕ್ಷಗಳು) ಯ ಅಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಹದೇವಪುರ ವಲಯದ ದೊಡ್ಡಕನ್ನಲ್ಲಿ ಕೆರೆಯಲ್ಲಿ ಮಳೆನೀರು ಸಂಗ್ರಹಣೆ ಮಾಡಿ ಅಭಿವೃದ್ಧಿಪಡಿಸಲು ತಗಲುವವೆಚ್ಚ ರೂ.375.00 ಲಕ್ಷಗಳಾಗಿದ್ದು, ಸದರಿ ಕೆಲಸವನ್ನು ಅನುಮೋದಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:**15–11–2011** ರ ಟಿಪ್ಪಣಿ.

**<u>ನಿರ್ಣಯ</u> : – ಮಾನ್ಯ ಆಯುಕ್ತರ ದಿನಾಂಕ:15–11–2011 ರ ಟಿಪ್ಪಣಿಯನ್ನು ಒಪ್ಪಿದೆ.**

**8. ವಿಷಯ ಸಂಖ್ಯೆ:ತೋ/ಸ್ಥಾ/ಸ/36/ 11–12, ದಿನಾಂಕ: 19–11–2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ವಲಯದ ಶ್ರೀಗಂಧದಕಾವಲು ಕೆರೆಯನ್ನು ಪಾಲಿಕೆಯ ವತಿಯಿಂದ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ ಹಾಗೂ ಸದರಿ ಕೆರೆಯ ಅಕ್ಕಪಕ್ಕದ ಬಡಾವಣೆಯಲ್ಲಿ ಯಾವುದೇ ಉದ್ಯಾನವನವಿಲ್ಲದೆ ಇರುವುದರಿಂದ ಸದರಿ ಕೆರೆಯನ್ನು ಅಭಿವೃದ್ಧಿಪಡಿಸಿ ಕೆರೆಯ ಸುತ್ತಲೂ ವಾಕಿಂಗ್ ಟ್ರಾಕ್ ನಿರ್ಮಾಣ ಮಾಡಿ, ವಸತಿ ರಹಿತರ ಬಡಾವಣೆಯಲ್ಲಿ ಯಾವುದೇ ಉದ್ಯಾನನವಿಲ್ಲದಿರುವುದರಿಂದ, ಸದರಿ ಕೆರೆಯನ್ನು ಅಭಿವೃದ್ಧಿಪಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಈಗಾಗಲೇ ಸದರಿ ಕೆರೆಯ ಸರ್ವೆ ಕಾರ್ಯವನ್ನು ಕೈಗೊಂಡು ಕೆರೆಯ ಗಡಿ ಬಾಂದುಗಳನ್ನು ತಾಲ್ಲೂಕು ಸರ್ವೆಯರ್‌ರವರು ಗುರುತಿಸಿದ್ದು, ಸರ್ವೆ ನಕ್ಷೆಯನ್ನು ತಹಶೀಲ್ದಾರರು, ಬೆಂಗಳೂರು ಉತ್ತರ ರವರು ಧೃಡೀಕರಿಸಿರುತ್ತಾರೆ ಹಾಗೂ ಸದರಿ ಕೆರೆಯ ಗಡಿ ಭಾಗಕ್ಕೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ, ಉಳಿದ ಕೆರೆಯ ಗಡಿ ಭಾಗಕ್ಕೆ ಚೈನ್ ಲಿಂಕ್ ತಂತಿಬೇಲಿ ಅಳವಡಿಸುವ ಕಾಮಗಾರಿ ಮುಗಿಸಲಾಗಿರುತ್ತದೆ. ಕೆರೆಯಲ್ಲಿನ ಒಟ್ಟು 1 ಎಕರೆ 28 ಗುಂಟೆ ಒತ್ತುವರಿಯಾಗಿದ್ದು, ಒತ್ತುವರಿದಾರರಿಗೆ ಕರ್ನಾಟಕ ಭೂಕಂದಾಯ ಅಧಿನಿಯಮದಂತೆ ತಹಶೀಲ್ದಾರರು, ಬೆಂಗಳೂರು ಉತ್ತರರವರು ನೋಟೀಸ್ ಜಾರಿ ಮಾಡಿ, ಒತ್ತುವರಿದಾರರ ಪ್ರತ್ಯುತ್ತರವನ್ನು ಪರಿಶೀಲಿಸಿ ಕೆರೆಯಲ್ಲಿನ ಎಲ್ಲಾ ಒತ್ತುವರಿಯನ್ನು ತೆರವುಗೊಳಿಸಲು ತಹಶೀಲ್ದಾರರು, ಬೆಂಗಳೂರು ಉತ್ತರರವರು ಒತ್ತುವರಿ ತೆರವು ಆದೇಶ ನೀಡಿರುತ್ತಾರೆ.

ಸದರಿ ಕೆರೆಯಲ್ಲಿನ ಅನಧಿಕೃತ ನಿವೇಶನಗಳನ್ನು ದಿನಾಂಕ:29–10–2011 ರಂದು ಕೆರೆಯಲ್ಲಿನ ಒತ್ತುವರಿಯನ್ನು ಸ್ಥಳೀಯ ಪೋಲೀಸರ ಹಾಗೂ ಬಿ.ಎಂ.ಟಿ.ಎಫ್. ಪೋಲೀಸರ ಸಹಯೋಗದೊಂದಿಗೆ ಕೆರೆಯಲ್ಲಿನ ಅಮ್ಮ ಭಗವಾನ್ ದೇವಾಲಯದ ಕಟ್ಟಡ ಹೊರತುಪಡಿಸಿ ಉಳಿದ ಎಲ್ಲಾ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ.

ಹಾಗೂ ಅಮ್ಮ ಭಗವಾನ್ ದೇವಾಲಯಕ್ಕೆ ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯವು ಮುಂದಿನ ವಿಚಾರಣೆಯವರೆವಿಗೂ ತಡೆಯಾಜ್ಞೆಯನ್ನು ನೀಡಿದ್ದು, ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಮುಂದಿನ ಕ್ರಮ ಕೈಗೊಳ್ಳುವಂತೆ ಅಗತ್ಯ ದಾಖಲೆಗಳನ್ನು ಕಾನೂನು ವಿಭಾಗಕ್ಕೆ ಸಲ್ಲಿಸಲಾಗಿರುತ್ತದೆ.

ಸದರಿ ಕೆರೆಯ ಅಭಿವೃದ್ಧಿಗೆ ರೂ.300.00 ಲಕ್ಷಗಳ ಅಂದಾಜುಪಟ್ಟಿಯನ್ನು ಮುಖ್ಯ ಅಭಿಯಂತರರು, ಪರಿಸರ ಕೋಶ–ಕೆರೆಗಳು ರವರ ವಿಭಾಗದಿಂದ ತಯಾರಿಸಲಾಗಿದ್ದು, ಸದರಿ ಅಂದಾಜುಪಟ್ಟಿಯಲ್ಲಿ ಕೆಳಕಂಡ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುವು ಮಾಡಲಾಗಿದೆ.

1. ಕೆರೆಯಲ್ಲಿ ಬೆಳೆದಿರುವ ಗಿಡಗಂಟೆಗಳನ್ನು ತೆರವುಗೊಳಿಸುವುದು.
2. ಹಾಲಿ ಒತ್ತುವರಿಯಾಗಿರುವ ಪ್ರದೇಶದಲ್ಲಿನ ಕಟ್ಟಡಗಳ ಅವಶೇಷಗಳನ್ನೊಳಗೊಂಡಂತೆ ಕೆರೆಯಲ್ಲಿನ ಅನುಪಯುಕ್ತ ಮಣ್ಣನ್ನು ತೆಗೆದು ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವುದು.
3. ಕೆರೆಯ ಗಡಿಭಾಗದ ತಂತಿ ಬೇಲಿಯ ಪಕ್ಕದಲ್ಲಿ ಏರಿ ನಿರ್ಮಿಸುವುದು.
4. ಮಳೆನೀರನ್ನು ಕೆರೆಗೆ ತರುವ ಕಾಲುವೆಗಳ ಇನ್‌ಲೆಟ್‌ಗಳನ್ನು ಬಲಪಡಿಸುವುದು.
5. ಮಳೆನೀರನ್ನು ಕೆರೆಗೆ ತರುವ ಕಾಲುವೆಗಳಿಂದ ಕೆರೆಗೆ ಮಣ್ಣು ಬಾರದಂತೆ ಸಿಲ್ಟ್‌ಟ್ರಾಫ್‌ನ್ನು ನಿರ್ಮಿಸುವುದು.
6. ಇನ್‌ಲೆಟ್‌ಗಳ ಮುಖಾಂತರ ಕೆರೆಗೆ ಬರುವ ಕೊಳಚೆ ನೀರು ಬಾರದಂತೆ ಪೈಪ್ ಲೇನ್ ಮೂಲಕ ಹೊರ ಬಿಡಲು ಡೈವರ್‌ಷನ್ ಚಾನಲ್ ನಿರ್ಮಾಣ.
7. ಕೆರೆಯ ಸುತ್ತಲೂ ಪಾದಚಾರಿ ಮಾರ್ಗವನ್ನು ನಿರ್ಮಿಸುವುದು.
8. ಕೆರೆಯ ಏರಿಯ ಮೇಲಿನ ಪಾದಚಾರಿ ಮಾರ್ಗಕ್ಕೆ ಕಾಬಲ್ ಸ್ಟೋನ್‌ಗಳನ್ನು ಅಳವಡಿಸುವುದು.
9. ಕೆರೆ ಕೋಡಿಯ ನಿರ್ಮಾಣ ಕಾಮಗಾರಿಗಳು.
10. ಕೆರೆಯ ಮುಖ್ಯ ನಾಲೆಯ ಬಳಿ ವಾಕ್ ವೇ ಕ್ರಾಸಿಂಗ್ ನಿರ್ಮಿಸುವುದು.
11. ಕೆರೆಯಲ್ಲಿ ಕಾವಲುಗಾರರಿಗೆ ಕೊಠಡಿ ನಿರ್ಮಾಣ ಮಾಡುವುದು.
12. ಕೆರೆಯ ಏರಿ ಮೇಲೆ ಪರ್‌ಗೋಲ ನಿರ್ಮಿಸುವುದು.

ಈ ಹಿನ್ನೆಲೆಯಲ್ಲಿ ಸದರಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕೆರೆ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ 2012 ನೇ ಸಾಲಿನಲ್ಲಿ ಬರುವ ಮಳೆನೀರನ್ನು ಕೆರೆಯಲ್ಲಿ ಸಂಗ್ರಹಿಸಲು ಅನುವಾಗುತ್ತದೆ ಹಾಗೂ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿನ ಬಹುತೇಕ ಬಡಾವಣೆಗಳಲ್ಲಿನ ಅಂತರ್ಜಲ ಮಟ್ಟವನ್ನು ಸುಧಾರಿಸುವ ಹಿತದೃಷ್ಠಿಯಿಂದ, ಸದರಿ ಕೆರೆಯ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿ ರೂ.300.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಗೆ ಪಿ–2175 ಲೆಕ್ಕ ಶೀರ್ಷಿಕೆಯಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಕಾಮಗಾರಿ ಸಂಕೇತ ನೀಡಲು

ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:**16–11–2011** ರ ಟಿಪ್ಪಣಿ.

**<u>ನಿರ್ಣಯ</u> : – ಮಾನ್ಯ ಆಯುಕ್ತರ ದಿನಾಂಕ:16–11–2011 ರ ಟಿಪ್ಪಣಿಯನ್ನು ಒಪ್ಪಿದೆ.**

**9. ವಿಷಯ ಸಂಖ್ಯೆ:ತೋ/ಸ್ಥಾ/ಸ/37/ 11–12, ದಿನಾಂಕ: 17–12–2011**

ಬಿ.ಬಿ.ಎಂ.ಪಿ. ಅರಣ್ಯ ಘಟಕದ ದಕ್ಷಿಣ ವಿಭಾಗದ ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ಪರಿಸರದ ದೃಷ್ಠಿಯಿಂದ ನಗರ ಹಸಿರೀಕರಣ ಭಾಗವಾಗಿ 25000 ಗಿಡಗಳನ್ನು 2011ನೇ ಸಾಲಿನ ಮಳೆಗಾಲದಲ್ಲಿ ನೆಟ್ಟು ನಿರ್ವಹಿಸಲು ಉದ್ದೇಶಿಸಿದ್ದು, ಈಗಾಗಲೇ ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನಲ್ಲಿ ಸೂಕ್ತವಾದ ಸ್ಪಂದನ ಕಂಡುಬರದೇ ಇರುವ ಕಾರಣದಿಂದ ಹಾಗೂ ಈಗಾಗಲೇ ಮಳೆಗಾಲ ಅಂತ್ಯವಾಗುತ್ತಾ ಬಂದಿರುವ ಹಿನ್ನೆಲೆಯಲ್ಲಿ, ಈ ಕಾಮಗಾರಿಯನ್ನು ಈ ಕಛೇರಿ ಆದೇಶ ಸಂಖ್ಯೆ:SC/P/PSR/2030/11-12, ದಿನಾಂಕ:11–08–2011ರ ಪ್ರಕಾರ ಸರ್ಕಾರಿ ಸಂಸ್ಥೆಯಾದ ಮೆ॥ಕೆ.ಆರ್.ಐ.ಡಿ.ಎಲ್. ಮೂಲಕ ತುರ್ತಾಗಿ ನಿರ್ವಹಿಸಲು ಉದ್ದೇಶಿಸಲಾಗಿದೆ.

25000 ಸಂಖ್ಯೆಯ ಗಿಡಗಳನ್ನು ಬೆಳೆಸಿ ಅವುಗಳನ್ನು ದಿನಾಂಕ: 22–10–2011 ರಿಂದ ದಿನಾಂಕ: 31–03–2012 ರವರೆಗೆ ನಿರ್ವಹಿಸಲು ತಗಲುವ ಅಂದಾಜು ವೆಚ್ಚ ರೂ.89.22 ಲಕ್ಷಗಳಾಗಿದ್ದು ಹಾಗೂ ಈ ಮೊತ್ತದ ಮೇಲೆ ಶೇ.5% ರಷ್ಟು ಸೇವಾ ಶುಲ್ಕ ಮತ್ತು ಮೇಲೆ ಶೇ.5% ರಷ್ಟು ಶಾಸನಬದ್ಧ ತೆರಿಗೆಗಳು ಸೇರಿ ಒಟ್ಟು ವೆಚ್ಚ ರೂ.98.14 ಲಕ್ಷಗಳಿಗೆ ಅನುಮೋದನೆ ಕೋರಿ ಹಾಗೂ ಈ ಕುರಿತು ಅಗತ್ಯವಿರುವ ಮೇಲ್ಕಂಡ ಮೊತ್ತಕ್ಕೆ ಜಾಬ್‌ಕೋಡ್ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:**15–12–2011** ರ ಟಿಪ್ಪಣಿ.

**<u>ನಿರ್ಣಯ</u> : – ಮಾನ್ಯ ಆಯುಕ್ತರ ದಿನಾಂಕ:15–12–2011 ರ ಟಿಪ್ಪಣಿಯನ್ನು ಒಪ್ಪಿದೆ.**

**10. ವಿಷಯ ಸಂಖ್ಯೆ:ತೋ/ಸ್ಥಾ/ಸ/38/ 11–12, ದಿನಾಂಕ: 17–12–2011**

ಗೌರವಾನ್ವಿತ ನ್ಯಾಯಮೂರ್ತಿ ಶ್ರೀ.ಎನ್.ಕೆ.ಪಾಟೀಲ್‌ರವರು, ಛೇರ್ಮನ್ ಕೆ.ಎಸ್.ಎಲ್.ಎಸ್.ಎ., ದಿನಾಂಕ:03–07–2011 ರಂದು ಮಡಿವಾಳ ಕೆರೆ ಪರಿವೀಕ್ಷಣೆ ಮಾಡಿರುತ್ತಾರೆ. ಪರಿವೀಕ್ಷಣೆ ಸಮಯದಲ್ಲಿ ನ್ಯಾಯಮೂರ್ತಿರವರು ಮಡಿವಾಳ ಕೆರೆಗೆ ಹೆಚ್ಚುವರಿ ಕೊಳಚೆ ನೀರು ಸಂರಕ್ಷಣಾ ಘಟಕ ಸ್ಥಾಪಿಸಲು ಸೂಚಿಸಿರುತ್ತಾರೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ.ರವರು ತಿಳಿಸಿರುವಂತೆ, ಈ ಘಟಕದ ಸಾಮರ್ಥ್ಯವು 6 ಎಂ.ಎಲ್.ಡಿ. ಆಗಿರುತ್ತದೆ ಹಾಗೂ ಈ ಕೆಲಸಗಳಿಗೆ ಅವಶ್ಯವಿರುವ ಎರಡು ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಯು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಗೆ ಹಸ್ತಾಂತರಿಸಲು ಒಪ್ಪಿರುವುದಾಗಿ ತಿಳಿಸಿರುತ್ತಾರೆ. ಈ ಘಟಕಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಫಂಡ್ ನೀಡಲು ಕೋರಿರುತ್ತಾರೆ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಂದ ಕಾಮಗಾರಿ ನಿರ್ವಹಿಸಲಾಗುವುದೆಂದು ಕೋರಿರುತ್ತಾರೆ.

ಮುಂದುವರೆದು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಅರಣ್ಯ ಇಲಾಖೆಯವರಿಗೆ ಈ ಘಟಕಕ್ಕೆ ಅವಶ್ಯವಿರುವ ಜಮೀನು ನೀಡುವಂತೆ ಕೋರಿರುತ್ತಾರೆ ಹಾಗೂ ಸದರಿ ಘಟಕಕ್ಕೆ ಲೈನ್ ಅಂದಾಜು ಪಟ್ಟಿಯನ್ನು ರೂ.15.00 ಕೋಟಿಗಳಿಗೆ ತಯಾರಿಸಿರುತ್ತಾರೆ. ಕಾಮಗಾರಿ ಪೂರ್ವ ತಯಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.1.00 ಕೋಟಿ ಆರಂಭಿಕ ಡಿಪಾಸಿಟ್ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಗೆ, ಮಾನ್ಯ ಆಯುಕ್ತರು ಅನುಮೋದನೆ ನೀಡಿದ್ದು, ಸದರಿ ಪ್ರಸ್ತಾವನೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆಯಲಾಗಿದೆ. ಆದ್ದರಿಂದ ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:12–12–2011 ರ ಟಿಪ್ಪಣಿ.

**<u>ನಿರ್ಣಯ :–</u> ಮಾನ್ಯ ಆಯುಕ್ತರ ದಿನಾಂಕ:12–12–2011 ರ ಟಿಪ್ಪಣಿಯನ್ನು ಒಪ್ಪಿದೆ.**

**11. ವಿಷಯ ಸಂಖ್ಯೆ:ತೋ/ಸ್ಥಾ/ಸ/39/ 11–12, ದಿನಾಂಕ: 20–12–2011**

ಮುಖ್ಯ ಅಭಿಯಂತರರು(ಪರಿಸರ ಕೋಶ) ರವರು ಯಲಹಂಕ ವಲಯದ ದೊಡ್ಡ ಬೊಮ್ಮಸಂದ್ರ ಕೆರೆಯ ಹಂತ–1ರ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.385.30 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಹೊಸ ಕೆರೆಗಳ ಅಭಿವೃದ್ಧಿಗಾಗಿ, ಲೆಕ್ಕ ಶೀರ್ಷಿಕೆ ಪಿ–2175 ರ ಅಡಿಯಲ್ಲಿ ರೂ.3000.00 ಲಕ್ಷಗಳನ್ನು ನಿಗಧಿ ಪಡಿಸಲಾಗಿರುತ್ತದೆ.

ದೊಡ್ಡ ಬೊಮ್ಮಸಂದ್ರ ಕೆರೆಯ ಅಭಿವೃದ್ಧಿಗಾಗಿ ರೂ.436.00 ಲಕ್ಷಗಳಿಗೆ ವಿವರವಾದ ಯೋಜನಾ ವರದಿ(ಡಿ.ಪಿ.ಆರ್)ನ್ನು ತಯಾರಿಸಲಾಗಿದ್ದು, ಮೊದಲನೇ ಹಂತದ ಕಾಮಗಾರಿಯಲ್ಲಿ ಕೆರೆಯ ಅಭಿವೃದ್ಧಿ, ಏರಿ ಅಭಿವೃದ್ಧಿಪಡಿಸುವುದು, ಸಿಲ್ಟ್ ಟ್ರಾಪ್ ಅಭಿವೃದ್ಧಿ, ಲೀಡ್ ಡ್ರೈನ್ ಅಭಿವೃದ್ಧಿ, ಕೊಳಚೆ ನೀರಿನ ತಿರುವು ಕಾಲುವೆ, ವಿಗ್ರಹ ವಿಸರ್ಜನೆಗಾಗಿ ಕಲ್ಯಾಣಿ ನಿರ್ಮಾಣ, ಒಳಹರಿವು ಹಾಗೂ ಹೊರಹರಿವು ಅಭಿವೃದ್ಧಿ, ಶೌಚಾಲಯ, ಕಾವಲುಗಾರರ ಕೊಠಡಿ, ಎಮ್.ಎಸ್. ಗ್ರಿಲ್ ಗೇಟ್ ಮತ್ತು ಕರ್ಬ್ ಸ್ಟೋನ್ ಇತ್ಯಾದಿಗಳನ್ನೊಳಗೊಂಡಂತೆ ಕಾಮಗಾರಿಗಳನ್ನು ನಿರ್ವಹಿಸುವುದು ಅವಶ್ಯವಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.385.30 ಲಕ್ಷ (ಮೂನ್ನೂರ ಎಂಭತ್ತೈದು ಲಕ್ಷದ ಮೂವತ್ತು ಸಾವಿರ ಮಾತ್ರ)ಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಾಮಗಾರಿ ಸಂಕೇತ ಪಡೆಯುವ ಪ್ರಸ್ತಾವನೆಗೆ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 12–12–2011 ರ ಟಿಪ್ಪಣಿ.

**<u>ನಿರ್ಣಯ</u> :–ಮಾನ್ಯ ಆಯುಕ್ತರ ದಿನಾಂಕ:12–12–2011 ರ ಟಿಪ್ಪಣಿಯನ್ನು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ, ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :–

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- *ವಿಶೇಷ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು(ಕೆರೆಗಳು–ಪರಿಸರ ಕೋಶ) ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು(ಕೆರೆಗಳು–ಪರಿಸರ ಕೋಶ) ರವರಿಗೆ ಕಳುಹಿಸಿದೆ..
- ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) & (ದಕ್ಷಿಣ) ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ–(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ / ಮಹದೇವಪುರ)ರವರಿಗೆ ಕಳುಹಿಸಿದೆ.
- *ತೋಟಗಾರಿಕೆ ಅಧೀಕ್ಷಕರು* (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ವಲಯ ಅರಣ್ಯಾಧಿಕಾರಿಗಳು(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- *ಅಧಿಕ ಕೌನ್ಸಿಲ್ ಕಾರ್ಯದರ್ಶಿರವರಿಗೆ* ಕಳುಹಿಸಿದೆ
- ಕಛೇರಿ ಪ್ರತಿ.